**ದಿನಾಂಕ: 08-07-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು:-**

**<u>ಪಾಟೀ ಸವಾಲು : ಆರೋಪಿ ಪರ ಶ್ರೀ.ಎ.ಕೆ.ಎಂ. ವಕೀಲರಿಂದ :</u>**

ಆರೋಪಿತರು ದಿನಾಂಕ:26.03.2019 ರಂದು ನಮ್ಮ ಸೋಸೈಟಿಯಲ್ಲಿ ರೂ.45,000/- ಸಾಲವನ್ನು ಪಡೆದುಕೊಂಡ ಬಗ್ಗೆ ಕರಾರು ಪತ್ರ ಮಾಡಿರುತ್ತೇವೆ. ಸದರಿ ಸಾಲವನ್ನು ಮಂಜೂರು ಮಾಡುವ ಸಮಯದಲ್ಲಿ ಆರೋಪಿತನ ಕಡೆಯಿಂದ ಆತನ ಆಧಾರ ಕಾರ್ಡ, ಪ್ಯಾನಕಾರ್ಡ ಮತ್ತು ಇಬ್ಬರು ಜಾಮೀನುದಾರರನ್ನು ಪಡೆದುಕೊಂಡಿರುತ್ತೇವೆ. ಸದರಿ ಸಾಲವನ್ನು ಮಂಜೂರು ಮಾಡುವ ಸಮಯದಲ್ಲಿ ಈ ಮೇಲಿನ ದಾಖಲಾತಿಗಳಲ್ಲದೆ ಸಾಲದ ಭದ್ರತೆಗಾಗಿ ಆರೋಪಿತನ ಖಾಲಿ ಚೆಕ್‌ನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ಸಾಲದ ಮೊತ್ತ, ಬಡ್ಡಿಯ ದರ ಮತ್ತು ಯಾವ ರೀತಿ ಮರು ಪಾವತಿಸಬೇಕೆಂದು ನಮೂದು ಇರುತ್ತದೆ ಎಂದರೆ ಸರಿ.

ನಮ್ಮ ಬ್ಯಾಂಕಿನಲ್ಲಿ ಆರೋಪಿತನದು ಪಿಗ್ಮಿ ಖಾತೆ ಇರುತ್ತದೆ ಎಂದರೆ ಸರಿ. ಆರೋಪಿತನು ಪಿಗ್ಮಿಯನ್ನು ನಿಯಮಿತವಾಗಿ ಕಟ್ಟುತ್ತಿದ್ದನು ಎಂದರೆ ಸಾಕ್ಷಿಯು ಆರೋಪಿತನು ಪಿಗ್ಮಿಯನ್ನು ತುಂಬಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತನು ಎಷ್ಟು ಹಣವನ್ನು ನಮ್ಮ ಬ್ಯಾಂಕಿಗೆ ಮರಳಿ ತುಂಬಿರುತ್ತಾನೆ ಎಂದು ಖಾತೆ ಸ್ಟೇಟಮೆಂಟನ್ನು ನೋಡಿ ಹೇಳುಬಹುದು. ಸದರಿ ಪ್ರಕರಣವನ್ನು ನಾನೇ ದಾಖಲಿಸಿದ್ದರಿಂದ ಆರೋಪಿತನು ಎಷ್ಟು ಹಣವನ್ನು ತುಂಬಬೇಕಾಗಿರುತ್ತದೆ ಎಂದು ಗೊತ್ತು ಇರಬೇಕಾಗುತ್ತದೆ ಎಂದರೆ ನಮ್ಮ ಬ್ಯಾಂಕಿನಲ್ಲಿ ಸಾಕಷ್ಟು ಸಾಲದ ಖಾತೆಗಳು ಇರುವುದರಿಂದ ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತನು ಈಗಾಗಲೇ ನಮ್ಮ ಬ್ಯಾಂಕಿಗೆ ಎಷ್ಟು ಹಣವನ್ನು ಮರು ಪಾವತಿಸಿರುತ್ತಾನೆ ಎಂದು ಲಿಗಲ್ ನೋಟಿಸ್‌ನಲ್ಲಿ ಮತ್ತು ಖಾಸಗಿ ಪಿರ್ಯಾದಿಯಲ್ಲಿ ನಮೂದಿಸಲಾಗಿರುತ್ತದೆ.

ಆರೋಪಿತನು ಎಷ್ಟು ಹಣವನ್ನು ಮರುಪಾವತಿಸಿರುತ್ತಾನೆ ಮತ್ತು ಎಷ್ಟು ಹಣವನ್ನು ಮರು ಪಾವತಿಸಬೇಕಾಗಿದೆ ಎಂಬುದರ ಬಗ್ಗೆ ಖಾತೆ ಸ್ಟೇಟಮೆಂಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆರೋಪಿತನ ಬರೆದು ಕೊಟ್ಟ ಕರಾರು ಪತ್ರ ಮತ್ತು ಸಾಲದ ಖಾತೆಯ ಸ್ಟೇಟಮೆಂಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಸಾಲದ ಬಡ್ಡಿ ದರದ ಬಗ್ಗೆ ಲೀಗಲ್ ನೋಟಿಸ್‌ನಲ್ಲಿ ಮತ್ತು ಪಿರ್ಯಾದಿಯಲ್ಲಿ ನಮೂದಿಸಲಾಗಿರುತ್ತದೆ. ಆರೋಪಿತನು ರೂ.76,263/- ಗಳನ್ನು ಮರಳಿ ನೀಡುತ್ತೆನೆ ಎಂದು ಒಪ್ಪಿಕೊಂಡ ಬಗ್ಗೆ ಲಿಖಿತವಾಗಿ ಬರೆದುಕೊಟ್ಟಿರುತ್ತಾನೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ.

ನ್ಯಾಯಾಲಯಕ್ಕೆ ಯಾವುದೆ ಪ್ರಕರಣವನ್ನು ದಾಖಲಿಸಬೇಕಾದರೆ ನಮ್ಮ ಸೋಸೈಟಿಯಿಂದ ಮೊದಲಿಗೆ ಅಧಿಕಾರ ಪತ್ರವನ್ನು ನೀಡುತ್ತಾರೆ ಎಂದರೆ ಸರಿ. ಆರೋಪಿತನಿಗೆ ಈ ಪ್ರಕರಣದ ಲಿಗಲ್ ನೋಟಿಸ್ ನೀಡುವ ಸಮಯದಲ್ಲಿ ಸೋಸೈಟಿಯಿಂದ ನನಗೆ ಅಧಿಕಾರ ಪತ್ರ ನೀಡಿಲ್ಲ ಎಂದರೆ ಸರಿ. ಆರೋಪಿತನು ನೀಡಿದ ಖಾಲಿ ಚೆಕ್ಕಿನಲ್ಲಿ ನಮ್ಮ ಸೋಸೈಟಿಯಲ್ಲಿ ನಾನೇ ನಮೂದಿಸಿರುತ್ತೇನೆ ಎಂದರೆ ಸರಿ. ಆರೋಪಿತನು ನಮ್ಮ ಸೋಸೈಟಿಗೆ ಒಂದು ಕಂತನ್ನು ಮರಪಾವತಿಸದೆ ಇರುವುದರಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೆನೆ ಎಂದರೆ ಸರಿ.

**(ಮರು ವಿಚಾರಣೆ ಇರುವುದಿಲ್ಲ)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)** **ಜೆ.ಎಂ.ಎಫ್.ಸಿ ನ್ಯಾಯಾಧೀಶರು**
**ಬಸವಕಲ್ಯಾಣ**